ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಗೃಹ - ಸಿಡಿ ಪ್ರಕರಣ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 15/3/21

# ಸಿ.ಡಿ ಯುವತಿ ಹೈದರಾಬಾದಲ್ಲಿ?

## ಅಜ್ಜಿಯ ಮನೆಗೆ ಪೊಲೀಸ್ ನೋಟಿಸ್

ವಿಕ ಸುದ್ದಿಲೋಕ ಬೆಂಗಳೂರು

ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎಂದು ಆಪಾದಿಸಲಾಗಿರುವ ಅಶ್ಲೀಲ ವಿಡಿಯೊ ಪ್ರಕರಣ ಕುರಿತು ಮಹತ್ವದ ಬೆಳವಣಿಗೆಗಳು ಸಂಭವಿಸುತ್ತಿವೆ.



ಯುವತಿಯನ್ನು ವಿಶೇಷ ತನಿಖಾ ದಳ ಪೊಲೀಸರು ಹೈದರಾಬಾದ್‌ನಲ್ಲಿ ಪತ್ತೆ ಹಚ್ಚಿದ್ದಾರೆ ಎನ್ನಲಾಗಿದೆ. ಯುವತಿ ಯಾವ ಹೇಳಿಕೆ ನೀಡುತ್ತಾಳೆ, ಏನೆಂದು ದೂರು ನೀಡುತ್ತಾಳೆ ಎನ್ನುವುದರ ಮೇಲೆ ಪ್ರಕರಣದ ತೀರ್ಪು ಅವಲಂಬಿಸಿದೆ.

ವಿಚಾರಣೆಗೆ ಹಾಜರಾಗುವಂತೆ ಯುವತಿಗೆ ನೋಟಿಸ್ ನೀಡಲಾಗಿತ್ತು. ವಿಜಯಪುರದ ನಿಡಗುಂದಿಯಲ್ಲಿರುವ ಆಕೆಯ ಅಜ್ಜಿ ಮನೆಗೆ ಪೊಲೀಸರು ನೋಟಿಸ್ ಅಂಟಿಸಿದ್ದರು.

ಈ ನಡುವೆ ಪ್ರಭಾವಿ ರಾಜಕಾರಣಿಗಳಿಂದ 'ಸಿ.ಡಿ ತಯಾರಿ ಮತ್ತು ಬಿಡುಗಡೆ'ಗೆ ಹಣ ರೂಪಿಸಲಾಗಿತ್ತೇ ಎಂಬುದನ್ನು ಪತ್ತೆ ಮಾಡಲು, ತಲೆಮರೆಸಿಕೊಂಡಿರುವ ಪ್ರಮುಖ ಶಂಕಿತ ಆರೋಪಿಯಾಗಿರುವ ಮಾಜಿ ಪತ್ರಕರ್ತನಿಗಾಗಿ ಎಸ್ಐಟಿ ತೀವ್ರ ಶೋಧ ನಡೆಸಿದೆ. ಈ ಪ್ರಕರಣ ತೀವ್ರ ರಾಜಕೀಯ ಜಟಾಪಟಿಗೂ ಕಾರಣವಾಗುವ ಸಾಧ್ಯತೆ ಇದೆ.

ವಿಡಿಯೊದಲ್ಲಿ ತನಗೆ ಮತ್ತು ಕುಟುಂಬಕ್ಕೆ ರಕ್ಷಣೆ ಕೋರಿರುವ ಯುವತಿಗೆ ಭದ್ರತೆ ನೀಡಲಾಗುತ್ತದೆ.

- ಬಸವರಾಜ ಬೊಮ್ಮಾಯಿ ಗೃಹ ಸಚಿವ